**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಅರಸೀಕೆರೆ.**

**ಸಿ.ಸಿ.ನಂ.207/2026**

ಪಿರ್ಯಾದಿದಾರರು ಃ ಬಾಣವರ ಪೋಲಿಸ್ ಠಾಣೆ,
ಅರಸೀಕೆರೆ ತಾಲ್ಲೂಕು.

ಃವಿರುದ್ಧಃ

ಆರೋಪಿ ಃ ಹೇಮಂತ್ ಬಿನ್ ಸ್ವಾಮಿ,
23 ವರ್ಷ ವಯಸ್ಸು,
ವಾಸಃ- ಹಿತ್ತಲ ಗದ್ದೆ ಕಿರುವಾಸೆ ಗ್ರಾಮ,
ಬ್ರಾಹ್ಮಣಕಪ್ಪಿಗೆ ಪೋಸ್ಟ್, ಸಾಗರ ತಾಲ್ಲೂಕು.

**ಆರೋಪಣೆ**

ಸಾಕ್ಷಿ.1 ರವರು ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಶಶಿ ಡಿಸ್ಟಲಿರಿಸ್ ಪ್ರೈ.ಲಿ ಕಂಪನಿಯಲ್ಲಿ ಅಸಿಸ್ಟೆಂಟ್ ಹೆಚ್.ಆರ್ ಆಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ 04/03/2026 ರಂದು ಅವರ ಕಂಪನಿಯಿಂದ ಕೆ.ಎಸ್.ಬಿ.ಸಿ.ಎಲ್ ಸಾಗರಕ್ಕೆ 515 ಮದ್ಯದ ಬಾಕ್ಸ್ ಗಳನ್ನು ಸಾಕ್ಷಿ. 4 ರವರ ಕೆಎ-15-ಬಿ-0616 ರ ಮಹೀಂದ್ರಾ ಬೊಲೆರೋ ಪಿಕಪ್ ಗೂಡ್ಸ್ ವಾಹನಕ್ಕೆ ಸಂಜೆ 06-00 ಗಂಟೆಯ ಸಮಯದಲ್ಲಿ ತುಂಬಿದ್ದು, ಸದರಿ ವಾಹನವನ್ನು ಆರೋಪಿಯು ಚಾಲನೆ ಮಾಡಿಕೊಂಡು ರಾತ್ರಿ 11-30 ಗಂಟೆಯ ಸಮಯದಲ್ಲಿ ಬಾಣಾವರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಣಾವರ-ಕಡೂರು ಎನ್-ಹೆಚ್-69 ರಸ್ತೆಯಲ್ಲಿ ಎ.ಮಲ್ಲಾಪುರ ಗೇಟ್ ಹತ್ತಿರ ಶ್ರೀನಿವಾಸ ರವರ ಜಮೀನಿನ ನೇರದಲ್ಲಿ ಹೋಗುತ್ತಿರುವಾಗ ಆರೋಪಿಯು ಸಾರ್ವಜನಿಕ ರಸ್ತೆಯಲ್ಲಿ ಮಾನವನ ಪ್ರಾಣಕ್ಕೆ ಹಾನಿ ಉಂಟು ಮಾಡುವ ರೀತಿಯಲ್ಲಿ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಅತೀವೇಗವಾಗಿ ಚಾಲನೆ ಮಾಡಿಕೊಂಡು ಬಂದು, ರಸ್ತೆಯ ಎಡಬದಿಯ ಪುಟ್ ಪಾತ್ ನಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿಪಡಿಸಿರುತ್ತೀರಿ, **ಆ ಮೇರೆಗೆ ಭಾರತೀಯ ನ್ಯಾಯ ಸಂಹಿತ 2023 ರ ಕಲಂ.281** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದಂತಹ ಆಪಾದನೆಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗ ತಕ್ಕದ್ದು ಅಂಥ ಈ ಮೂಲಕ ಆದೇಶ ಮಾಡಿರುತ್ತೇನೆ.

ಪ್ರಶ್ನೆಃ- ಈಗ ಓದಿ ಹೇಳಿದ ಆಪಾದನೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ-

ಪ್ರಶ್ನೆಃ- ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ-

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕಃ 19.06.2026.
ಸ್ಥಳಃ ಅರಸೀಕೆರೆ.

(ಶ್ರೀಮತಿ. ದೀಪಿಕಾ ಎಸ್.)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಅರಸೀಕೆರೆ.